ಬೊಂದಯನ ಮೋರೆ ಸಪ್ಪಗಾಯಿತು. ಬಹಳ ಆಸೆಪಟ್ಟು ಬಂದಂತಿದ್ದನು. ಕಣ್ಣಲ್ಲಿ ನೀರು ತುಂಬಿಬಂತು. ತಹಶೀಲ್ದಾರ ಕೂಡ ಸಂಕಟದಿಂದ ನೋಡಿ ಹೊರಡು ಎನ್ನುವಂತೆ ಡ್ರೈವರ್‌ಗೆ ಸನ್ನೆ ಮಾಡಿದ.

ಕಾರು ಮುಂದಕ್ಕೆ ಕದಲಿತು. ಏನೋ ನೆನಪಾದಂತೆ ಕೂಡಲೇ ಓಡಿಬಂದು, 'ಸಾರೂ, ಸಾರೂ... ನೀವು ಸಿರಿಸಿಲ್ಲಕ್ಕೇ ಅಲ್ಲವಾ... ನಾನು ವೆಂಕಟಾಪುರದವರೆಗೂ ಬರುತ್ತೇನೆ. ಈಗ ಬಸ್ ಇಲ್ಲ' ಎಂದನು ಬೊಂದಯ. ನಿಜ ಹೇಳಬೇಕೆಂದರೆ ಅವನಿಗೆ ಅಲ್ಲೇನೂ ಕೆಲಸವಿರಲಿಲ್ಲ. ಪಕ್ಕದಲ್ಲಿ ಕುಳಿತು ತನ್ನ ಸಂಕಟವನ್ನು ಹೇಳಿಕೊಂಡು ಕೈಕಾಲು ಹಿಡಿದಾದರೂ ಹಕ್ಕುಪತ್ರ ಬರೆಸಿಕೊಳ್ಳಬೇಕು ಎಂದು ಮನಸ್ಸಿನಲ್ಲಿ ಅಂದುಕೊಂಡು ಕೇಳಿದನು.

ಕಾರು ಮತ್ತೆ ನಿಂತಿತು. 'ಅಯ್ಯೋ... ನಾನು ಹೀಗೆ ತುರ್ಕಹಳ್ಳಿಯ ಮೇಲೆ ಹೋಗುತ್ತೇನೆ... ಆ ಕಡೆ ಹೋಗುವುದಿಲ್ಲ' ಗ್ಲಾಸ್ ಇಳಿಸಿ ಸಮಾಧಾನದಿಂದ ಹೇಳಿದನು ತಹಶೀಲ್ದಾರ.

ಬೊಂದಯನಿಗೆ ಏನು ಮಾಡಬೇಕೋ ಅರ್ಥವಾಗಲಿಲ್ಲ. ಅಳು ಬಂದಿತು. 'ಅರೆ ದುರದೃಷ್ಟ ಬೊಂದಿಗಾ... ಅವತ್ತು ಹಾಗೆ ಮಾಡದಿದ್ದರೆ ಎರಡೆಕರೆ ಭೂಮಿ ನಿನಗೇ ಇರುತ್ತಿತ್ತಲ್ಲವೇನೋ. ಈಗ ಅಲ್ಲಿ ಬಂಗಾರದ ಬೆಲೆ. ಎಲ್ಲೂ ಇಲ್ಲದೇ ಹೋದೆ. ಥೂ... ನಿನ್ನ ಮನೆ ಹಾಳಾಗ' ಎಂದು ಹತಾಶೆಯಿಂದ ಬೈದುಕೊಂಡನು.

ತಹಶೀಲ್ದಾರ ಏನಂದುಕೊಂಡನೋ ಒಮ್ಮೆಗೇ ಕೋಪದಿಂದ, 'ಏಯ್... ಏನು ಮಾತನಾಡುತ್ತಿದ್ದೀಯ... ಆಂ... ನಿನಗೆ ಕಾಗದಪತ್ರವಿಲ್ಲದಿದ್ದರೆ ನಾನೇನು ಮಾಡಕ್ಕಾಗುತ್ತೆ. ನನ್ನನ್ನೇಕೆ ಬೈಯ್ಯುತ್ತಿದ್ದೀಯ. ನಿನಗೆ ತಲೆಯಿದೆಯಾ.... ಯೂಸ್‌ಲೆಸ್ ಫೆಲೋ...' ಎಂದನು ಗದರಿಸಿದನು.

ಬೆಚ್ಚಿಬಿದ್ದನು ಬೊಂದಯ. ಆತ ಏಕೆ ಅಷ್ಟು ಕೋಪ ಮಾಡಿಕೊಂಡನೋ ಅರ್ಥವಾಗಲಿಲ್ಲ. ಭಯದಿಂದ ನೋಡುತ್ತ, 'ಅಯ್ಯೋ... ನಿನ್ನನ್ನೇಕೆ ಬೈದುಕೊಳ್ಳುತ್ತೇನೆ ಸಾರೂ... ನನ್ನ ಗ್ರಹಚಾರವನ್ನು ನಾನೇ ಬೈದುಕೊಳ್ಳುತ್ತಿದ್ದೇನೆ. ಯಾರ್ಯಾರಿಗೋ ಹಕ್ಕುಪತ್ರ ಸಿಗುತ್ತಿದೆ... ಹೂಡಿದ ಹಣ ಬರುತ್ತಿದೆ. ನನಗೇ ಭೂಮಿ ಇಲ್ಲದಾಯಿತು... ಹಣವೂ ಬರಲಿಲ್ಲ' ಎಂದನು.

ತಹಶೀಲ್ದಾರ ಆತನನ್ನು ವಿಚಿತ್ರವಾಗಿ ನೋಡಿ, 'ನಿನ್ನ ಹೆಸರು ಬೊಂದಯ ನಾ...' ಆಶ್ಚರ್ಯದಿಂದ ಕೇಳಿದನು.

ಹೌದೆಂದು ತಲೆಯಾಡಿಸಿದನು ಬೊಂದಯ. ಆತನನ್ನು ಮತ್ತೊಮ್ಮೆ ದಿಟ್ಟಿಸಿ, 'ಹತ್ತು ಎನ್ನುವಂತೆ' ಬಾಗಿಲು ತೆರೆದನು ತಹಶೀಲ್ದಾರ. ಮೊದಲು ಸ್ವಲ್ಪ ಅನುಮಾನ ಬಂದರೂ ಹತ್ತಿ ಪಕ್ಕದಲ್ಲಿ ಕುಳಿತನು ಬೊಂದಯ. ಕಾರು ಮುಂದಕ್ಕೆ ಚಲಿಸತೊಡಗಿತು.

ಇಳಿಯುವ ಒಳಗೆ ಹೇಗಾದರೂ ಒಪ್ಪಿಸಬೇಕೆಂದುಕೊಂಡನು. ಊರು ದಾಟಿದ ಮೇಲೆ ನಿಧಾನವಾಗಿ ಅತ್ತಿತ್ತ ಸರಿದು, ಚಬಬ್ಬರಿಗೆ ಒಳ್ಳೆಯದು ಮಾಡಿದರೆ ನಮಗೂ ಒಳ್ಳೆಯದಾಗುತ್ತದೆ ಎನ್ನುತ್ತಾರೆ... ಮತ್ತೆ ನನಗೇಕೆ ಸಾರೂ ಒಳ್ಳೆಯದು ಮಾಡಿದರೆ ಕೆಟ್ಟದಾಗಿದ್ದು...' ಎಂದನು ಬೊಂದಯ ಸ್ವಲ್ಪ ಸಂಕೋಚದಿಂದ.

ತಹಶೀಲ್ದಾರ ಆತನನ್ನೇ ನೋಡುತ್ತ, 'ಒಳ್ಳೆಯದು ಎಂಬುದು ಬೀಜದಂತೆ. ನಾವು ಹಾಕಿ ಮರೆತುಹೋಗುತ್ತೇವೆ. ಆದರೆ ಅದು ಚಿಗುರಲು ಮರೆಯುವುದಿಲ್ಲ. ಯಾವಾಗಲೋ ಸ್ವಲ್ಪ ಹಿಂದೆ ಮುಂದೆ ಮೊಳೆಯುತ್ತದೆ.. ಇಷ್ಟಕ್ಕೂ ನೀನು ಏನು ಒಳ್ಳೆಯ ಕೆಲಸ ಮಾಡಿದ್ದೀಯ...' ಕೇಳಿದನು.

ಈಗ ಸ್ವಲ್ಪ ಸರಾಗವೆನಿಸಿ ಮುಗ್ಧವಾಗಿ ನಕ್ಕು, 'ಅಯ್ಯೋ ಅದ್ಯಾವಾಗಲೋ ನನ್ನ ಸಣ್ಣ ವಯಸ್ಸಿನ ಹುಡುಗಾಟ. ಈ ಊರಿನಲ್ಲಿಯೇ ದೊರೆಯ ಚಿಕ್ಕ ಎತ್ತಿನ ಗಾಡಿಯನ್ನು ನಡೆಸುತ್ತಿದ್ದೆ. ಒಮ್ಮೆ ಜೀಪಿನಲ್ಲಿ ಇಬ್ಬರೂ ಚಿಪ್ಪಲಹಳ್ಳಿ ಜಂಗಲ್‌ಗೆ ಶಿಕಾರಿಗೆ ಹೋದೆವು. ಆಗ ಅದು ದೊಡ್ಡ ದಟ್ಟ ಕಾಡು.